


ದಿಗ್ಭ್ರಮೆಗೊಳಗಾದೆ. ಯಾಕೋ ಚಾರ್ಲಿ ಚಾಪ್ಲಿನ್ ನೆನಪಾದರು.

ನಾನು ಉತ್ತರಿಸಿದೆ. ಜೊತೆಗೇ ನಾನು ಆ ಮೊದಲೇ ಓದಿದ್ದ ಅವರ ಪ್ರಬಂಧವೊಂದರಲ್ಲಿ ಉಲ್ಲೇಖಿತವಾದ ಕ್ಯಾಥರಿನ್ ಮೆಯೋ ಬರೆದ 'ಮದರ್ ಇಂಡಿಯಾ' ಕೃತಿಯ ಕುರಿತು ಪ್ರಾಸಂಗಿಕವಾಗಿ ವಿಚಾರಿಸಿದೆ. ಬೇರೇನು ಬರೆದೆನೆಂದು ನೆನಪಿಲ್ಲ.

ಅವರು ತಕ್ಷಣ ಅಂದರೆ 2002ರ ಜ. 14ರ ಪತ್ರದೊಂದಿಗೆ ಆ ಕೃತಿಯ ಫೋಟೊಪ್ರತಿಯನ್ನು ಉದಾತ್ತವಾಗಿ ಕಳಿಸಿದರು. ಈ ಪುಸ್ತಕ ನನ್ನಲ್ಲಿದ್ದ ಒಂದು antique. ನೀವು ಇದರ ಹೊದಿಕೆಯನ್ನು, ಮುಖಪುಟದಲ್ಲಿದ್ದ 'ಕರುಂದವಾಡ (ಜೂ) ಸಂಸ್ಥಾನ'ದ ಲಾಂಛನವನ್ನು, ಪುಸ್ತಕದ ತುಂಬೆಲ್ಲ ಯಾರು ಯಾರೋ ಗೀಚಿದ ಟಿಪ್ಪಣಿಗಳನ್ನು, ಬರೆದ ಹೆಸರುಗಳನ್ನು ಒಮ್ಮೆ ನೋಡಬೇಕು. ನಿಮ್ಮೆದುರು ಒಂದು ಬೇರೆ ಲೋಕವೇ ತೆರೆದುಕೊಳ್ಳುತ್ತದೆ. ಪ್ರೇತಾತ್ಮಗಳ ಜೊತೆ ಮಾತಾಡಿದ ಅನುಭವವಾಗುತ್ತದೆ. (ಈ ಕೃತಿಯ ಮುದ್ರಿತ ಸ್ವರೂಪವನ್ನು ಮುಂದೆ ನನ್ನ ಮಗ ಮ್ಯಾಂಚೆಸ್ಟರಿನಿಂದ ತಂದುಕೊಟ್ಟ.)

ಹೀಗೆ ಒಂದು ಕಾರ್ಯಕ್ರಮದಿಂದ ನಮ್ಮ ನಡುವಿನ ಪತ್ರವ್ಯವಹಾರ, ಪುಸ್ತಕಗಳ ವಿನಿಮಯ ಹಾಗೂ ದೂರವಾಣಿ ಸಂಭಾಷಣೆ ಬೆಳೆಯಿತು. ಕಳೆದ ನಾಲ್ಕೈದು ವರ್ಷಗಳವರೆಗೂ ನಾನು ಬೆಂಗಳೂರಿಗೆ ಹೋದರೆ ಅವರನ್ನು ಕಾಣದೇ ಮರಳುತ್ತಿರಲಿಲ್ಲ. ಹೋದಷ್ಟು ಬಾರಿಯೂ ನಕ್ಕೂ

ಧಾರವಾಡ ಜಿಲ್ಲೆಯ ನವಲಗುಂದ ಶ್ರೀನಿವಾಸ ವೈದ್ಯರ ತವರು. ಕುಟುಂಬದ್ದು ವೈದ್ಯ ವೃತ್ತಿ. ತಂದೆ ಬಿ.ಜಿ. ವೈದ್ಯ ವಕೀಲರಾಗಿದ್ದವರು, ತಾಯಿ ಸುಂದರಾಬಾಯಿ ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದವರು. ಅಪ್ಪ–ಅಮ್ಮನ ಹಿನ್ನೆಲೆಯ ಸಾಹಿತ್ಯ ಹಾಗೂ ಸಾರ್ವಜನಿಕ ಜೀವನದ ಪರಿಚಯ ವೈದ್ಯರಿಗೆ ಕುಟುಂಬದತ್ತವಾಗಿ ಬಂದುದು. ಧಾರವಾಡದ ಕರ್ನಾಟಕ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಕೈಬರಹದ ಪತ್ರಿಕೆ 'ನಂದಾದೀಪ' ರೂಪಿಸುತ್ತಿದ್ದರು. ಕೆನರಾ ಬ್ಯಾಂಕ್ ಅಧಿಕಾರಿಯಾಗಿ ಮುಂಬಯಿ, ಬೆಳಗಾವಿ, ಗೋವಾ, ಧಾರವಾಡ, ದೆಹಲಿ, ಚೆನ್ನೈ ಮತ್ತು ಬೆಂಗಳೂರುಗಳಲ್ಲಿ ಕಾರ್ಯನಿರ್ವಹಣೆ. ವಿನೋದ ಅವರ ಬರಹಗಳಲ್ಲಿನ ಸ್ಥಾಯಿಗುಣ. ಪ್ರಕಟಿತ ಮೊದಲ ಪುಸ್ತಕವೂ ಹಾಸ್ಯ ಲೇಖನಗಳ ಸಂಕಲನವೇ – 'ತಲೆಗೊಂದು ತರತರ' (1994). 'ಮನಸುಖರಾಯನ ಮನಸು', 'ರುಚಿಗೆ ಹುಳಿಯೊಗರು' ಅವರ ಪ್ರಸಿದ್ಧ ಪ್ರಬಂಧ ಸಂಕಲನಗಳು. 'ಹಳ್ಳ ಬಂತು ಹಳ್ಳ' ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಕ್ಕೆ ಪಾತ್ರವಾಗಿರುವ ಕಾದಂಬರಿ. 'ಅಗ್ನಿಕಾರ್ಯ', 'ಮೊದಲ ಓದು', 'ಕಪ್ಪೆ ನುಂಗಿದ ಹುಡುಗ', 'ಕರ್ನಲ್‌ನಿಗೆ ಯಾರೂ ಬರೆಯುವುದೇ ಇಲ್ಲ' ಅವರ ಜನಪ್ರಿಯ ಕೃತಿಗಳು.